**International Journal of Academic Research**
P-ISSN: 2348-7666: Impact Factor: 7.215
Homepage: https://www.ijar.org.in/
Volume-13, Issue-3, July-Sep-2026
This work is licensed under a Creative Commons Attribution 4.0 International License [CC BY 4.0]

**Research Article**

# ಇಂದ್ರಿಯ ಜಯ

**ಡಾ. ಮುನಿರಾಜ ಎ.**
ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ–ಕನ್ನಡ, ಮದ್ರಾಸು ಕ್ರೈಸ್ತವ ಕಾಲೇಜು (ಸ್ವಾಯತ್ತ)
ತಾಂಬರಂ, ಚೆನ್ನೈ

**ಪೀಠಿಕೆ:**

ಕುವೆಂಪುರವರ ಕೋಗಿಲೆ ಮತ್ತು ಸೋವಿಯತ್ ರಷ್ಯಾ ಸಂಕಲನದಲ್ಲಿ 'ಇಂದ್ರಿಯ ಜಯ'ವೂ ಒಂದು ಕವನ. ಕುವೆಂಪುರವರ ಆಧ್ಯಾತ್ಮಿಕ ಚಿಂತನೆ ಮತ್ತು ಸಾಮಾಜಿಕ ಏಳಿಗೆಯ ಎರಡೂ ಯೋಚನೆಗಳನ್ನು ಈ ಪದ್ಯದಲ್ಲಿ ಕಾಣಬಹುದು. ಮನುಷ್ಯನ ಮನಸ್ಸಿನಲ್ಲಿ ಉದ್ಭವಿಸುವ ಆಲೋಚನೆಗಳು ಮತ್ತು ಅವುಗಳನ್ನು ಕೌಟುಂಬಿಕವಾಗಿ, ಸಾಮಾಜಿಕವಾಗಿ ನೆರವೇರಿಸಿಕೊಳ್ಳಲು ಅನುಸರಿಸಬೇಕಾದ ಮಾರ್ಗಗಳಿಗೆ ಹಲವಾರು ಕಟ್ಟುಪಾಡುಗಳುಂಟು. ಅದೆಲ್ಲವೂ ಸ್ವಸ್ತ ಸಮಾಜದ ನಿರ್ಮಾಣಕ್ಕಾಗಿ, ಶಾಂತಿ ನೆಮ್ಮದಿಯ ಬದುಕಿಗಾಗಿ ನಾವೇ ರೂಪಿಸಿಕೊಂಡ ನಿಯಮಗಳು. ಆದರೆ ಯಾವ ಕಾಲಘಟ್ಟದಲ್ಲಿಯೂ ಕತ್ತಲು ಬೆಳಕಿನಂತೆ ಪೂರ್ಣ ಒಳ್ಳೆಯವರು, ಪೂರ್ಣ ಕೆಟ್ಟವರೆಂದು ಇರಲು ಸಾಧ್ಯವಿಲ್ಲ. ಎಲ್ಲಾ ಕಾಲದಲ್ಲಿಯೂ ಎಲ್ಲಾ ಗುಣಗಳ ಮನುಷ್ಯರು ಇರುತ್ತಾರೆ. ತಮ್ಮ ಮನದ ಆಸೆಗಳನ್ನು ಈಡೇರಿಸಿಕೊಳ್ಳಲು ಅಧರ್ಮದ ಮಾರ್ಗಗಳನ್ನು ಹುಡುಕುವ ಇಂತಹವರನ್ನು ಎಲ್ಲ ಕಾಲದಲ್ಲಿಯೂ ದೂಷಿಸುತ್ತಲೇ ಬಂದಿದೆ ಸಮಾಜ. ಅರಿವುಗೆಟ್ಟವರಿಗೆ ಹಲವಾರು ವಿಧದಲ್ಲಿ ಅರಿವನ್ನು ತೋರಿಸುತ್ತಾ ನಡೆಸಿರುವುದು ಇಲ್ಲಿ ಕಾಣುತ್ತದೆ. ಇಂತಹ ಸಮಾಜದ ಸ್ಥಿತಿಯನ್ನು ಕುವೆಂಪುರವರು ಈ ಪದ್ಯದಲ್ಲಿ ಚಿತ್ರಿಸಿರುವುದು ಮನಮುಟ್ಟುವಂತಿದೆ. ಸೂಕ್ಷ್ಮ ಸಂವೇದನಾಶೀಲ ಕವಿ ತನ್ನ ಸಮಾಜದ ಜನರ ಒಳಿತಿಗಾಗಿ ಸದಾ ತುಡಿಯುತ್ತಾನೆ ಎಂಬುದು ಇವರ ಬರವಣಿಗೆಗಳಿಂದ ಸಾಬೀತಾಗುತ್ತದೆ. 'ಇಂದ್ರಿಯ ಜಯ' ಪದ್ಯವು ತನ್ನ ದೇಹದ ಇಂದ್ರಿಯಗಳನ್ನು ಜಯಿಸಬೇಕೆಂಬ ಆಸೆಯಿಂದ ವ್ಯಕ್ತಿ ಯಾರ್‍ಯಾರು ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡುತ್ತಾನೆ. ಆ ಎಲ್ಲಾ ಬದಲಾವಣೆಗಳು ಕೇವಲ ಶಾರೀರಿಕವಾಗಿರುತ್ತವೆ; ಮಾನಸಿಕವಾಗಿಯಲ್ಲ. ಈ ತೆರನಾದ ವಿಷಯವಸ್ತುವನ್ನುಳ್ಳ ಈ ಕವನದ ವಿಶ್ಲೇಷಣೆಯನ್ನು ಮಾಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**ವಿಷಯ ನಿರೂಪಣೆ**

ಕುವೆಂಪುರವರು ಜಗದ ಕವಿ, ಯುಗದ ಕವಿ ಮಾತ್ರವಲ್ಲ, ಅವರೊಬ್ಬ ಜನರ ಕವಿ. ತತ್ಕಾಲದ ಸಮಾಜದ ಜನರ ಒಳಿತಿಗಾಗಿ ದುಡಿದವರು; ಅದು ಸಾಹಿತ್ಯದ ಮೂಲಕ ವಂಚಕರಿಂದ ಸಮಾಜದ ಜನತೆಯನ್ನು ಸದಾ ಎಚ್ಚರಿಸುತ್ತಾ, ಯಾವುದೇ ರೀತಿಯ ಲೋಭಗಳಿಗೆ ಒಳಗಾಗದೆ ಮಾನವೀಯ ಮೌಲ್ಯಗಳ ಮೇಲೆ ಸಮಾಜವನ್ನು ರೂಪಿಸಿದವರು. ಅವರ ರಚನೆಗಳು ಅಜರಾಮರ. ಅಂತಹ ಒಂದು ಕವನ ಸಂಕಲನವಾದ 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಸಹ ಒಂದು. ಈ ಸಂಕಲನದಲ್ಲಿನ 'ಇಂದ್ರಿಯ ಜಯ' ಪದ್ಯವನ್ನು ಗಮನಿಸಿದಾಗ, ಸಹಜವಾಗಿ ಒಬ್ಬ ವ್ಯಕ್ತಿಗೆ ತಾನು ತನ್ನ ಇಂದ್ರಿಯಗಳನ್ನು ಜಯಿಸಬೇಕೆಂದು ಪಣತೊಟ್ಟಿರುವನು. ಹೀಗೆ ಪಣ ತೊಟ್ಟಿರುವುದು ಯಾವ ಗೃಹಸ್ಥನೂ ಅಲ್ಲ ಅವನು ಈಗಾಗಲೇ ಒಬ್ಬ ಸನ್ಯಾಸಿ. ಇಲ್ಲಿ ನಮಗೆ ಕಾಡುವ ಮೊಟ್ಟಮೊದಲ ಪ್ರಶ್ನೆಯೆಂದರೆ ಇಂದ್ರಿಯಗಳನ್ನು ಜಯಿಸದೆಯೇ ಅವನು ಹೇಗೆ ಸನ್ಯಾಸಿಯಾದ? 'ಎಲ್ಲಾನು ತೊರೆದವನು ಸಂತನೇ ಆದರೆ ವಸಂತನಿಗೆ ಸ್ಥಳವೆಲ್ಲಿದೆ?' ಎಂಬ ಮಾತನ್ನು ಕೇಳಿದ್ದೇವೆ. ಅಂದರೆ ಪ್ರಪಂಚದಲ್ಲಿನ ಯಾವುದೇ ಲೌಕಿಕ ಶಕ್ತಿಗಳು ಆಕರ್ಷಿಸದವನು ಸಂತ. ಅವನು ಎಲ್ಲ ರಾಗದ್ವೇಷಗಳ ಬಗ್ಗೆಯೂ ನಿರ್ಲಿಪ್ತ ಅಂತಹವನು ಸನ್ಯಾಸಿ. ಆದರೆ ಇಲ್ಲಿ ಸನ್ಯಾಸಿಯೇ 'ನನ್ನಿಂದ್ರಿಯಗಳನು ನಾನೆಂದು ಜಯಿಸುವೆನು?' ಎಂದು ಕೇಳುತ್ತಿದ್ದಾನೆ. ಈ ವ್ಯಕ್ತಿ ತಾನು ಸನ್ಯಾಸಿಯಾದದ್ದಕ್ಕೆ ಕಾರಣಗಳನ್ನು ಕೊಡುತ್ತಿದ್ದಾನೆ. ತಾನು ಮನಸಿನಲ್ಲಿ ನೆನೆಸಿದ ಈ ಕಾರಣಗಳೇ ಅವನನ್ನು ಕಾವಿ ತೊಡುವಂತೆ ಮಾಡಿವೆ. ಮೊದಲನೆಯದು 'ಲೋಕವೆಲ್ಲವೂ ಮಾಯೆ' ಈ ಮರ್ತ್ಯಲೋಕವು ಅನಂತ ಆಕರ್ಷಣೆಗಳ ಆಗರ. ಅದು ಪ್ರತಿಯೊಬ್ಬರನ್ನೂ ಒಂದಲ್ಲ ಒಂದು ರೀತಿಯಲ್ಲಿ ತನ್ನೆಡೆಗೆ ಸೆಳೆಯುತ್ತದೆ. ಅದು ಯಾವಾಗ ಯಶಸ್ವಿಯಾಗುವುದೆಂದರೆ ಆ ಯಾವುದೋ ಒಂದರ ಬಗ್ಗೆ ನಮ್ಮ ಮನಸ್ಸಿನಲ್ಲಿಯೂ ಒಲವಿದ್ದಾಗ ಮಾತ್ರ ಸಾಧ್ಯ.

"ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ
ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ
ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಗುಹೇಶ್ವರಾ"

ಸಂನ್ಯಾಸಿಯಾಗಿರುವ ಈ ವ್ಯಕ್ತಿಯು ಲೋಕವನ್ನು ಮಾಯೆ ಎಂದು ತೀರ್ಮಾನಿಸುವ ಮೊದಲು ತನ್ನ ಮನದ ಮಾಯೆಯ ಬಗೆಗೆ ಅರಿಯಬೇಕಿತ್ತು.

ಇನ್ನು ಎರಡನೆಯ ಕಾರಣ 'ಪ್ರೇಮವೆಂಬುದು ಮಿಥ್ಯೆ' – ಈ ಜಗತ್ತಿನ ಯಾವ ಪ್ರಾಣಿಗಳೂ ಪ್ರೇಮವಿಲ್ಲದೆ ಬದುಕಲಾರವು. ಅದರಲ್ಲೂ ಮನುಷ್ಯ ವರ್ಗಕ್ಕೆ, ಅದರ ಕೂಡುಜೀವನಕ್ಕೆ ಪ್ರೇಮ ಅತ್ಯವಶ್ಯ. ಈ ನೆಲದಲ್ಲಿ ನೆಲೆಯೂರಿರುವ ವೈವಿಧ್ಯಮಯ ಜನಾಂಗಗಳ ವೈಚಿತ್ರ್ಯಪೂರ್ಣವಾದ ಕಲಾಚಾರಗಳ, ಉಡುಗೆತೊಡುಗೆಗಳನ್ನು ಎಲ್ಲರೂ ಗೌರವಿಸುತ್ತಾ, ಹೊಂದಾಣಿಕೆಯಿಂದ ಬಳಲು ಬೇಕಾಗಿರುವ ಕೀಲೆಣ್ಣೆಯೇ ಪ್ರೇಮ. ಪ್ರೇಮವೆಂಬುದು ಕೇವಲ ಯುವಕ ಯುವತಿಯರ ನಡುವಿರುವುದಲ್ಲ. ಅದು ನಾವೆಸಗುವ ಪ್ರತಿಕ್ರಿಯೆಯಲ್ಲೂ ಇರುತ್ತದೆ. ಪ್ರೇಮ ಮಿಥ್ಯವಾದ ದಿನ, ಪ್ರೇಮ ಅಳಿದ ದಿನ ಬಹುಶಃ ಈ ಲೋಕ ಇಲ್ಲದಂತಾಗುತ್ತದೆ. ಹೀಗಿರುವಲ್ಲಿ ಪ್ರೇಮ ಮಿಥ್ಯವಾಗಲು ಹೇಗೆ ಸಾಧ್ಯ?
ಮೂರನೆಯದು 'ಸೌಂದರ್ಯವೆಂಬುದು ಪ್ರಕೃತಿಯೊಡ್ಡಿದ ಜಾಲ'–

ಸೌಂದರ್ಯ ಬಾಂಧವ್ಯಗಳನು ಬರಿದೆನಲಹುದೆ
ಹೊಂದಿಸವೆ ಕಂದಿಸವೆ ಜೀವಿಗಳನವುಗಳ್
ಸಿಂಧುಪೂರದಿ ಬಿದ್ದವರೊಳೊಬ್ಬರೊಬ್ಬರನು
ಅಂದಿಕೊಳಲದು ಬರಿದೆ ಮಂಕುತಿಮ್ಮ॥

ಮನುಷ್ಯನ ಕಣ್ಣಿಗೆ ಕಾಣುವ ಹಲವಾರು ನೋಟಗಳಲ್ಲಿ ಕೆಲವು ಮನಸ್ಸಿಗೆ ಹಿಡಿಸುತ್ತವೆ, ವಾಸ್ತವವಾಗಿ ಅವು ಮರೆಯಾದರೂ ಮನಸ್ಸಿನ ಸ್ಮೃತಿ ಪಟಲದ ಮೇಲೆ ಮತ್ತೆ ಮತ್ತೆ ಬಂದು ಅನುರಾಗವನ್ನು ಹುಟ್ಟಿಸುತ್ತವೆ. ಇಂತಹ ಸೌಂದರ್ಯವು ಪ್ರಕೃತಿಯಲ್ಲಿಯೂ, ಪ್ರಾಣಿಪಕ್ಷಿಗಳಲ್ಲಿಯೂ, ಮನುಷ್ಯರಲ್ಲಿಯೂ ಇರುತ್ತದೆ. ಆದರೆ ಮನುಷ್ಯರಲ್ಲಿ ಹೆಣ್ಣು ಗಂಡಿನ ನಡುವೆ ಈ ಸೌಂದರ್ಯದ ಪಾತ್ರ ಕೊಂಚ ಹೆಚ್ಚು. ಅದು ಎರಡು ಮನಸ್ಸುಗಳನ್ನು ಒಂದುಗೂಡಿಸಲು ಸಹಕಾರಿಯಾಗುತ್ತದೆ. ಕಲಾತ್ಮಕವಾದ ಏನೋ ಒಂದು ರೂಪುಗೊಳ್ಳಲು ಸಾಧ್ಯವಾಗುತ್ತದೆ. ಹೀಗೆ ಸೇರಿಕೊಂಡ ಎರಡು ಮನಸ್ಸುಗಳ ನಡುವೆ ಒಂದು ಬಾಂಧವ್ಯ ಏರ್ಪಡುತ್ತದೆ. ಮುಂದೆ ಇದರಿಂದ ಸಂಸಾರ, ಕುಟುಂಬ ಮೊದಲಾಗುತ್ತದೆ. ಈ ಎಲ್ಲದಕ್ಕೂ ಮೂಲವಾದ ಸೌಂದರ್ಯವನ್ನು ಬರೆದೆನಲು ಹೇಗೆ ಸಾಧ್ಯ. ಸೌಂದರ್ಯ ಎನ್ನುವುದು ಪ್ರಕೃತಿಯೊಡ್ಡಿದ ಜಾಲವಾಗಿದ್ದರೆ ಅದರಿಂದ ಹತ್ತಿರ ಸೇರಿದ ಮನುಷ್ಯರು ಅವಸಾನವನ್ನು ಹೊಂದಬೇಕಿತ್ತು. ಆದರೆ ಅದು ಜಗತ್ತಿನ ಮುಂದುವರಿಕೆಗೆ ಅವಶ್ಯವಾದ ಸೃಷ್ಟಿಯ ಕಡೆ ಹರಿದಿದೆ. ಹೀಗಿರುವಲ್ಲಿ ಅದು ಹೇಗೆ 'ಜಾಲ'ವಾಗುತ್ತದೆ. ಈ ರೀತಿಯಾದ ಸೌಂದರ್ಯದಿಂದ ಹೊಂದಿಕೊಂಡು ಬದುಕು ಸಾಧಿಸಿದ ಜೀವಿಗಳು ತಮ್ಮ ಕೊನೆಗಾಲದಲ್ಲಿ ಇಲ್ಲಿಂದ ಹೋಗುವಾಗ ಅನೇಕ ಸಂಬಂಧಗಳ ಬಾಂಧವ್ಯಗಳನ್ನು ಖಂಡಿತಾ ಹೊಂದಿರುತ್ತದೆ. ಆದರೆ ಅನಿವಾರ್ಯವಾಗಿ ಈ ಎಲ್ಲವುಗಳನ್ನು ತ್ಯಜಿಸಿ ಹೋಗಬೇಕಾದುದು ಕಾಲದ ಮಹಿಮೆ. ಇದೇ ಜೀವಿಗಳನು ಹೊಂದಿಸಿ, ಕಂದಿಸುವ ಸೌಂದರ್ಯ; ಬಾಂಧವ್ಯಗಳು. ಈ ಸಂಸಾರವೆಂಬ ಭವಸಾಗರದಲ್ಲಿ ಆಸರೆಗಾಗಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ಬದುಕು ಸಾಧಿಸುವ ಈ ಬಂಧನವು ಅದು ಹೇಗೆ ಯಾರೋ ಒಡ್ಡಿದ 'ಜಾಲ'ವಾಗುತ್ತದೆ. ಇದನ್ನೇ ಬೇಂದ್ರೆ 'ಹೊರಗೆ ಬರಿದು ಒಳಗೆ ಬಲಿತು ಇದ್ದವರಿಗೆ ನೇಮ' ಎನ್ನುತ್ತಾರೆ. ಬದುಕಿನುದ್ದಕ್ಕೂ ಪ್ರತಿಯೊಂದಕ್ಕೂ ಒಬ್ಬರಿಗೊಬ್ಬರೆನ್ನುತ್ತಾ 'ವ್ರತ'ದಂತೆ ಬದುಕುವ ಈ ಸಂಬಂಧಗಳನ್ನು ಅವುಗಳಿಗೆ ಕಾರಣವಾದ ಸೌಂದರ್ಯ ಬಾಂಧವ್ಯಗಳು ಪ್ರಕೃತಿಯೊಡ್ಡಿದ ಜಾಲವೆ? ಅದು ವಂಚನೆಯೆ? ಮೋಸವೆ? ಹಾಗೆನ್ನಲಾಗುವುದಿಲ್ಲವಲ್ಲ.

ಹಾಗೆಯೇ 'ಸಂಸಾರ ಮರುಭೂಮಿ' ಎನ್ನುತ್ತಾನೆ ಈ ಸನ್ಯಾಸಿ. ಹಾಗಾದರೆ ನಂದನವನ ಯಾವುದು? ಮರುಭೂಮಿಯಾದ ಈ ಸಂಸಾರದಲ್ಲೇ ಏಕೆ ಎಲ್ಲರೂ ಸಾಯಬೇಕು, ಅದಾವುದೋ ನಂದನವನಕ್ಕೆ ಎಲ್ಲರನ್ನೂ ಒಯ್ಯಬಹುದಲ್ಲ. ಮೇಲಾಗಿ ಎಲ್ಲರೂ ಇಷ್ಟಪಟ್ಟೇ ಸಂಸಾರವಂದಿಗರಾಗುತ್ತಾರೆ. ಇದು ಹೇಗೆ ಮರುಭೂಮಿಯಾಗುತ್ತದೆ. ಇಲ್ಲಿರುವುದೆಲ್ಲವನ್ನೂ ಬಿಟ್ಟರೆ ಮುಂದೆ ಅದಾವುದೋ ಕಾಣದ ಎಲ್ಲವೂ ಲಭಿಸುತ್ತದೆಯೆನ್ನುವ ಆಶೆಯೊಂದು ಇಲ್ಲಿ ಕಾಣುತ್ತಿದೆ. ಹೀಗೆ ಮುಂದೆ ಅದಾವುದೋ ಲಭಿಸುತ್ತದೆನ್ನುವ ಭ್ರಾಂತಿಯ ಸಾಧನೆಗೆ ಆತ ಇಂದ್ರಿಯಗಳನ್ನು ಜಯಿಸಬೇಕಿದೆ, ಅದಕ್ಕಾಗಿಯೇ ಸಿಕ್ಕಸಿಕ್ಕವರನ್ನು ಕೇಳುತ್ತಿದ್ದಾನೆ, ಅವನಿಗೆ ಸಿಕ್ಕ ಉತ್ತರಗಳು

"ಕಾಶಿಯನು ಕಂಡಂದು;" "ಮೋಹಗಳ ಬಿಟ್ಟಂದು;"
"ಕಾಮ ಜಯವಾದಂದು;" "ದ್ವಂದ್ವಗಳ ಗೆದ್ದಂದು;"
ಕಾನನಕೆ ನಡೆದು ಏಕಾಂತದಲಿ ಕುಳಿತಂದು;"

ಹೀಗೆ ಅವರವರಿಗೆ ತೋಚಿದ್ದನ್ನು ಹೇಳಿ ಹೋದರು. ಎಲ್ಲರು ಹೇಳಿದ್ದನ್ನೂ ಕೇಳಿ ಅವೆಲ್ಲವುಗಳ ಆಚರಣೆಗೂ ನಿಂತ ಈ ವ್ಯಕ್ತಿಗೆ ಫಲ ಮಾತ್ರ ಶೂನ್ಯ. ಕಾಶಿಯನು ಕಂಡ ಕೂಡಲೆ ಮನುಷ್ಯ ದೈವತ್ವಕ್ಕೇರುತ್ತಾನೆಯೆ? ದಕ್ಷಿಣದ ಕಾಗೆಯೊಂದು ಉತ್ತರದ ಗಂಗೆಯಲಿ ಮಿಂದೊಡೆ ಕೋಗಿಲೆಯಾಗುವುದೇ ಎನ್ನುವ ಕವಿಗಳ ವಾಕ್ಯವು ನೆನಪಾಗುತ್ತದೆ. ಪ್ರಸ್ತುತದ ಉತ್ತರದ ಕುಂಭಮೇಳಕ್ಕೆ ಜನ ಮರುಳೋ, ಜಾತ್ರೆ ಮರುಳೋ ಎಂಬಂತೆ ಹೋಗುತ್ತಿರುವ ಮತ್ತು ಹಲವಾರು ಕಾರಣಗಳಿಂದ ಸಾಯುತ್ತಿರುವ ಜನರಿಗೂ ಸಹ ಇದೇ ರೀತಿಯ ಮಂಕು ಕವಿದಿರುವುದು ಎನ್ನಬಹುದು. ಸಾವಿರಾರು ಜನರು ಏಕಕಾಲಕ್ಕೆ ಒಂದೇ ಎಡೆಯಲ್ಲಿ ಸ್ನಾನ ಮಾಡಿದರೆ ಉಂಟಾಗಬಹುದಾದ ಅಶುಭ್ರತೆ, ಅಷ್ಟೂ ಜನರಿಗೆ ಬೇಕಾಗುವ ಸೌಕರ್ಯ, ಸವಲತ್ತುಗಳು ಇವೆಲ್ಲವುಗಳ ಕೊರತೆಯಿಂದ ಉಂಟಾಗಬಹುದಾದ ಮಾನ ಮತ್ತು ಪ್ರಾಣ ಹಾನಿಯ ಬಗ್ಗೆ ಆಳುವ ವರ್ಗಗಳು ಸದಾ

ಮೌನವಾಗಿದ್ದು, ತಮ್ಮ ಪರವಾದ ವಿಷಯಗಳನ್ನು ಮಾತ್ರ ಎಲ್ಲ ಮಾಧ್ಯಮಗಳ ಮೂಲಕ ಜನತೆಗೆ ತಲುಪಿಸಿ ಅವರನ್ನು ಅಮೂರ್ತವಾದ ಒಂದು ನಶೆಯಲ್ಲಿ ಮುಳುಗಿಸಿ ತನ್ನ ಕಾರ್ಯವನ್ನು ಜಯಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಇದರ ಅರಿವು ಸಾಮಾನ್ಯ ಜನತೆಗೆ ಇರಬೇಕಾಗುತ್ತದೆ. ಇನ್ನು 'ಮೋಹಗಳ ಬಿಟ್ಟಂದು' – ಮೋಹ ಎನ್ನುವುದು ಎಲ್ಲಾ ಜೀವಿಗಳಲ್ಲಿಯೂ ಕಂಡುಬರುತ್ತದೆ. ಪ್ರತಿಯೊಂದು ಸಂಬಂಧದಲ್ಲಿಯೂ ಮೋಹವಿರುತ್ತದೆ. ಮನುಷ್ಯರಲ್ಲಿಯೂ ಸ್ವಜಾತಿ, ಸ್ವಧರ್ಮ, ಸ್ವಕುಟುಂಬ ಎಲ್ಲವುಗಳಿಗೂ ಉಂಟು. ಇಂದಿನ ಕಾವಿ ತೊಟ್ಟ ಸನ್ಯಾಸಿಗಳು, ತಮ್ಮ ಸ್ವಗುಣವನ್ನೇ ಮರೆತು ವರ್ತಿಸುತ್ತಿರುವುದು ಕಂಡುಬರುತ್ತದೆ. ಸನ್ಯಾಸಿ ಎಂದರೆ ಎಲ್ಲವನ್ನೂ ತೊರೆದಿರುವವನಲ್ಲವೆ? ಆದರೆ ಇಂದಿನ ಹಲವಾರು ಸನ್ಯಾಸಿಗಳು 'ಹಿಂದೂ ಧರ್ಮ' ಎಂಬ ಒಂದು ಧಾರ್ಮಿಕ ಭಾವನೆಯನ್ನು ದತ್ತು ತೆಗೆದುಕೊಂಡಿರುವಂತೆ ನಡೆದುಕೊಳ್ಳುತ್ತಿರುವುದನ್ನು ನೋಡಿದರೆ ಅವರ ಒಳಗಿನ ಯಾವ ಮೋಹಗಳೂ ಅವರನ್ನು ಬಿಟ್ಟಿಲ್ಲ. ಅವರು ಈ ಎಲ್ಲಾ ವೇಷಗಳನ್ನು ತೊಟ್ಟಿರುವುದು ಕೇವಲ ವಂಚನೆಗಾಗಿ. ಅದರ ಮೂಲಕ ತಮ್ಮ ಮನದಿಚ್ಛೆಯನ್ನು ಸಾಧಿಸಲು ಎಂಬುದು ವೇದ್ಯವಾಗುತ್ತದೆ.

ಹಾಗೆಯೇ ಕಾಮವನ್ನು ಜಯಿಸಬೇಕೆನ್ನುವ ಪರಿಕಲ್ಪನೆಯೂ ಇಲ್ಲಿ ವ್ಯಕ್ತವಾಗುತ್ತದೆ. ಕಾಮ ಎಂದರೆ ಕೇವಲ ಪ್ರಾಯದ ಹೆಣ್ಣುಗಂಡುಗಳ ನಡುವಿನ ಒಡನಾಟವಲ್ಲ. ಕಾಮವೆಂದರೆ ಆಸೆ. ಕಾಮಿಸಿದ್ದನ್ನೆಲ್ಲ ನಿಡುವುದೇ ಕಾಮಧೇನು. ಮನುಷ್ಯ ಕಾಮವನ್ನು ಜಯಿಸುವುದೆಂದರೇನು? ಅಂತರಂಗ ಬಹಿರಂಗಕ್ಕೂ ಇದು ಅನ್ವಯಿಸುತ್ತದೆಯೇ? ಸರ್ವಜ್ಞ ಹೀಗೆನ್ನುತ್ತಾನೆ.
ವಚನದೊಳಗೆಲ್ಲವರು ಶುಚಿವೀರ ಸಾಧುಗಳು

ಕುಚ ಹೇಮ ಶಸ್ತ್ರ ಸೋಂಕಿದೊಡೆ
ಲೋಕದೊಳಗಚಲದವರಾರು ಸರ್ವಜ್ಞ

ಹೌದು, ಕೇವಲ ಮಾತಿನಲ್ಲಿ ಹೇಳಿಕೊಳ್ಳುವಾಗ ಲೋಕರೂಢಿಯಲ್ಲಿ ಎಲ್ಲರೂ ತಮ್ಮ ಹೆಚ್ಚುಗಾರಿಕೆಯನ್ನೇ ಹೇಳಿಕೊಳ್ಳುತ್ತಾರೆ. ಆದರೆ ಸಂದರ್ಭಗಳ ಒತ್ತಡಕ್ಕೆ ಸಿಲುಕಿದಾಗ ಶುಚಿ, ವೀರ, ಸಾಧುಗಳೆನಿಸಿದವರು ಹೆಣ್ಣು, ಹೊನ್ನು, ಆಯುಧದ ಮುಂದೆ ಒಂದು ಕ್ಷಣ ಅಧೀರರಾಗದಂತಹ ಮನುಷ್ಯರನ್ನು ನೋಡಲು ಸಾಧ್ಯವೆ? ಎನ್ನುತ್ತದೆ ಸರ್ವಜ್ಞನ ಈ ತ್ರಿಪದಿ. ಇಂದು ಕಾವಿ ಧರಿಸುವುದು, ಬೂದಿ ಬಳಿದುಕೊಳ್ಳುವುದು ಇವೆಲ್ಲವೂ ಉದರ ಪೋಷಣೆಯ ಸುಲಭೋಪಾಯಗಳೆನಿಸಿವೆ. ಸನ್ಯಾಸತ್ವದ ಲಕ್ಷಣಗಳೇ ಮಾಯವಾಗುತ್ತಿವೆ ಅನ್ನಿಸುತ್ತದೆ. ಇನ್ನು ದ್ವಂದ್ವಗಳನ್ನು ಗೆಲ್ಲಬೇಕೆನ್ನುವ ಇರಾದೆಯೊಂದನ್ನು ಯಾರೋ ವ್ಯಕ್ತಪಡಿಸುತ್ತಾರೆ. ದ್ವಂದ್ವವೆಂದರೇನು? ಕೈವಾರ ತಾತಯ್ಯನವರು 'ತನ್ನುತಾನೆರುಗಾಡು ತಾನೆವ್ವರಿಕಿ ಗುರುವು' ಎನ್ನುತ್ತಾರೆ. ಪ್ರಾಯಶಃ ದ್ವಂದ್ವವೆಂದರೆ ಇದೇ ಇರಬಹುದು. ತನ್ನನ್ನೇ ತಾನು ಅರಿಯದವ ಸಮಾಜಕ್ಕೇನು ನೀಡಬಲ್ಲ. ಮೊದಲು ತಾನು ಪಡೆಯಬೇಕಾಗಿರುವ ಅರಿವನ್ನು ಪಡೆಯಬೇಕೆಂದು ತಾತಯ್ಯನವರ ಅನಿಸಿಕೆ. ಇನ್ನು ಕಾನನಕೆ ನಡೆದು ಏಕಾಂತದಲಿ ಕುಳಿತು ಅಂದರೆ ತಪಸ್ಸನ್ನು ಮಾಡಬೇಕು ಎಂದು ಸೂಚಿಸಿದ್ದನ್ನೂ ಸಹ ಮಾಡಲು ತಯಾರಾಗುವ ಸನ್ಯಾಸಿ ಅದರಲ್ಲಿಯೂ ವಿಫಲನಾಗುತ್ತಾನೆ. ಕಾರಣ ತಪಸ್ಸು ಬೇಕಾಗಿರುವುದು ಶರೀರಕ್ಕಲ್ಲ ಮನಸಿಗೆ.

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ?
ಘೋರತಪವ ಮಾಡಿದರೇನು?
ಅಂತರಂಗ ಶುದ್ಧವಿಲ್ಲದವರನೆಂತು
ಮೆಚ್ಚುವನಯ್ಯಾ ಕೂಡಲಸಂಗಮದೇವಾ

ಎನ್ನುತ್ತಾನೆ ಬಸವಣ್ಣ. ಸಾಧಿಸಬೇಕಿರುವುದು ಮನಸ್ಸಿನ ಸಾಧನೆಗಳೇ ವಿನಃ ದೇಹದ ಸಾಧನೆಗಳಲ್ಲ. ದೇಹದ ಸಾಧನೆಗಳನ್ನು ಯಾರು ಬೇಕಾದರೂ ಮಾಡುತ್ತಾರೆ. ಆದರೆ ಮನಸ್ಸಿನ ದೃಢತೆಯು ಕೆಲವರಿಗೆ ಮಾತ್ರ ಸಾಧ್ಯವಾಗುತ್ತದೆ. ಬದುಕಿನ ಎಲ್ಲ ದುಃಖ ಕಷ್ಟ ತಿರಸ್ಕಾರಗಳಿಗೆ ಕಾರಣವಾದ ಕೋರಿಕೆಗಳನ್ನು ಮನಸ್ಸಿನಲ್ಲಿ ತುಂಬಿಟ್ಟುಕೊಂಡು ತಪ, ಉಪವಾಸ, ಜಪ, ಜಾಗರಣೆಗಳನ್ನು ಮಾಡುವ ಮೂಲಕ ಶರೀರವನ್ನು ಶಿಕ್ಷಿಸಿದರೆ ಅದು ಮೂರ್ಖತನವಾಗುವುದಿಲ್ಲವೆ?

ಆತ್ಮ ಶುದ್ಧಿಲೇನಿ ಆಚಾರಮದಿಯೇಲ
ಬಾಂಡ ಶುದ್ಧಿಲೇನಿ ಪಾಕಮೇಲ
ಚಿತ್ತಶುದ್ಧಿಲೇನಿ ಶಿವಪೂಜಲೇಲಯ್ಯಾ
ವಿಶ್ವಧಾಭಿರಾಮ ವಿನುರ ವೇಮ

ಎನ್ನುತ್ತಾನೆ ತೆಲುಗಿನ ವೇಮನ ಕವಿ. ನಮ್ಮ ಎಲ್ಲಾ ಆಚಾರ, ಪೂಜೆ, ಪುನಸ್ಕಾರಗಳಿಗೂ ಮೊದಲೆ ನಮ್ಮ ಆತ್ಮ, ಮನಸ್ಸು ಶುದ್ಧವಾಗಿರಬೇಕು ಎನ್ನುತ್ತಾನೆ. ಮನಸ್ಸಿನೊಳಗಿನ ಎಲ್ಲ ಬಯಕೆಗಳನ್ನೂ ಹಾಗೆಯೇ ಇಟ್ಟುಕೊಂಡು ಭೌತಿಕ ಪ್ರಪಂಚಕ್ಕೆ ತನ್ನ ಬಣ್ಣ ಬದಲಿಸಿ ತೋರಿಸುವ ಸಲುವಾಗಿ ಆಡುವ ನಾಟಕಗಳು ಎಂದಾದರೂ ಹೊರಬೀಳುತ್ತವೆ.

ಇರುಳಿಗೆ ಮೊಲೆಯೋನಿ ಅಧರ
ಹಗಲಿಗೆ ಸಂಪುಟ ಲೇಖ
ಮಾತಿನ ಮಾಲೆಯ ಸರಕು
ವೇಷದ ಪುಣ್ಯ
ಸುಡು ಭ್ರಾಂತರ ಮಾತು

ಸಾಕು ನಿಲ್ಲು
ಐಘಟದೂರ ರಾಮೇಶ್ವರ ಲಿಂಗ ಅವರ ಬಲ್ಲನಾಗಿ

ಲೌಖಿಕ ಭೋಗಗಳಿಗೆ ದಾಸರಾಗಿ ವಾಮಮಾರ್ಗಗಳಲ್ಲಿ ಅವನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾ ಸಮಾಜಕ್ಕೆ ಉತ್ತಮ ವ್ಯಕ್ತಿತ್ವವನ್ನು ಪ್ರದರ್ಶಿಸಲು ಪ್ರಯತ್ನಿಸುವ ಶಿಖಾಮಣಿಗಳ ವೇಷ ಎಂದಾದರೊಂದು ದಿನ ಕಳಚಿ ಬೀಳುತ್ತದೆ ಮತ್ತು ಇಂತಹ ವ್ಯಕ್ತಿಗಳಿಂದ ಸಮಾಜಕ್ಕೆ ಹಾನಿಯೇ ಹೊರತು ಒಳಿತಿಲ್ಲ. ಇಲ್ಲಿ ಸನ್ಯಾಸಿ ಎಲ್ಲರು ಹೇಳಿದವುಗಳನ್ನೆಲ್ಲಾ ಮಾಡಿ ಯಾವುದೂ ಸಾಧಿಸಲಾಗದೆ ಬೀದಿ ಬೀದಿ ಅಲೆಯುವಾಗ ಯುವತಿಯೊಬ್ಬಳು ರಹಸ್ಯದಲ್ಲಿ ಕೊಡುವ ಬೂದಿ, ಆ ಬೂದಿಯು ಇಂದ್ರಿಯ ಜಯದ ಬಗ್ಗೆ ಹೇಳುವ ಮಾತು ಖಂಡಿತವಾಗಿಯೂ ಸನ್ಯಾಸಿಗೆ ಪ್ರಕೃತಿಯ ನಿಯಮಗಳ ಬಗೆಗೆ ಯೋಚಿಸುವಂತೆ ಮಾಡುತ್ತದೆ.

**ಉಪಸಂಹಾರ**

ಸನ್ಯಾಸವೆಂಬುದು ಶರೀರಕ್ಕೆ ತೊಡಿಸುವ ವೇಷವಲ್ಲ. ಅದು ಮನಸ್ಸಿನಲ್ಲಿ ಸಹಜವಾಗಿ ಜನಿಸಬೇಕಾದ ಕೂಸು. ಹಾಗೆ ಜನಿಸುವ ಕೂಸಿನಿಂದ ಈ ಲೋಕಕ್ಕೆ ಫಲವುಂಟು. ಸಂಸಾರ ಜವಾಬ್ದಾರಿಗಳಿಗೆ ಬೆನ್ನು ತಿರುಗಿಸಿದವರೆಲ್ಲ ಸನ್ಯಾಸಿಗಳಾಗಲಾರರು. ಸಂಸಾರ ವಂದಿಗರಾಗಿಯೂ, ಇಲ್ಲವೆ ಸಂಸಾರದಲ್ಲಿ ತುಂಬು ಜೀವನವನ್ನು ಕಳೆದು ಸನ್ಯಾಸಿಗಳಾದ ಅನೇಕ ಮಹಾತ್ಮರಿದ್ದಾರೆ. 'ನಿರ್ಣಯವನ್ನರಿಯದ ಮನವೆ ದುಗುಡವನ್ನಾಹಾರಗೊಂಡೆಯ' ಎನ್ನುವ ಅಲ್ಲಮನ ಮಾತಿನಂತೆ, ನಿರ್ದಿಷ್ಟವಾಗಿ, ದಿಟ್ಟವಗಿ ತಾವು ಬದುಕಬೇಕಾದ ತೀರನ್ನು ಅರಿಯದವರು ಅರ್ಥಾರ್ತ್ ಸಮರ್ಥವಾಗಿ ನಿಜ ಬದುಕನ್ನು ಎದುರಿಸಲಾರದವರು ಉಪಾಯದಿಂದ ಸರಾಗವಾದ ಜೀವನವನ್ನು ನಡೆಸಲು ಆರಿಸಿಕೊಳ್ಳುವ ಆಯ್ಕೆಯಾಗಿ ಸನ್ಯಾಸ ಇಂದು ಕಾಣುತ್ತಿದೆ. ಕಾಯ ವಿಕಾರಗಳೆಂದು ಕರೆಯಲ್ಪಡುವ ಇಂದ್ರಿಯಗಳು ದೇಹದಲ್ಲಿ ಬತ್ತಿ ಹೋಗಬೇಕೇ ವಿನಃ ಅವುಗಳನ್ನು ಒತ್ತಿ ಹಿಡಿದು ನಾವು ಏನನ್ನೋ ಸಾಧಿಸುತ್ತೇವೆ ಎನ್ನುವುದು ಅನರ್ಥಕ್ಕೆ ಎಡೆ ಮಾಡುತ್ತದೆ. ಕುವೆಂಪುರವರು 1933ರಲ್ಲಿ ಬರೆದಿರುವ ಈ ಕವನವು ಇಂದಿಗೂ ಪ್ರಸ್ತುತವೆನಿಸುವುದು ಕವಿಯ ಯೋಚನೆಯ ಸಾರ್ವಕಾಲಿಕತೆಗೆ ಸಾಕ್ಷಿಯಾಗಿದೆ.

**ಪರಾಮರ್ಶನ ಗ್ರಂಥಗಳು**

1. ಕೋಗಿಲೆ ಮತ್ತು ಸೋವಿಯತ್ ರಷ್ಯಾ, ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ಮೂರನೆಯ ಮುದ್ರಣ–1966
2. ಪ್ರಳಯದ ಕಸ, ಗುಂಡಣ್ಣ ಕಲಬುರ್ಗಿ, ಸೌಜನ್ಯ ಪ್ರಕಾಶನ, ಮೂಡಲಗಿ, ಮೊದಲ ಮುದ್ರಣ–2006
3. ಜಲಗಾರ, ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ಹದಿನೈದನೆಯ ಮುದ್ರಣ–2018
4. ಕರ್ನಾಟಕ ಜಾನಪದ, ಸಂ. ಜಿ.ಎಸ್. ಶಿವರುದ್ರಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಮೊದಲ ಮುದ್ರಣ–1981
5. ಪಗರಣ, ಎಂ. ಚಿದಾನಂದ ಮೂರ್ತಿ, ಪುಸ್ತಕ ಚಿಲುಮೆ, ಮಂಡಿ ಮೊಹಲ್ಲಾ, ಮೈಸೂರು, ಮೊದಲ ಮುದ್ರಣ–1984

**Citation:** ಡಾ. ಮುನಿರಾಜ ಎ. 2026. "ಇಂದ್ರಿಯ ಜಯ". International Journal of Academic Research, 13(3): 13-16.

**Copyright:** ©2026 ಡಾ. ಮುನಿರಾಜ ಎ. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.